ದಿನಾಂಕ:07.11.2020ರಂದು ಸಮಯ ಬೆಳಿಗ್ಗೆ 11.30 ಗಂಟೆಗೆ ವಾರ್ಡ್.ಸಂಖ್ಯೆ.44 ವಾರ್ಡ್ ಸದಸ್ಯರ ಕಛೇರಿಯಲ್ಲಿ ವಾರ್ಡ್ ಕಮಿಟಿ ಸಭೆಯನ್ನು ಮಾನ್ಯ ವಾರ್ಡ್ ಕಮಿಟಿ ಅಧ್ಯಕ್ಷರು ಹಾಗೂ ಪಾಲಿಕೆ ಸದಸ್ಯರ ಅಧ್ಯಕ್ಷತೆಯಲ್ಲಿ ಕರೆಯಲಾಯಿತು.

ಹಾಜರಿದ್ದ ಸದಸ್ಯರು ಮತ್ತು ಅಧಿಕಾರಿಗಳು

1. ಶ್ರೀಮತಿ ಕೆ ಸ್ವಯಂಪ್ರಭಾ, ಅಧೀಕ್ಷಕ ಅಭಿಯಂತರರು (ಪಶ್ಚಿಮ) ವಲಯ (ಅಧ್ಯಕ್ಷರು)
2. ಶ್ರೀ. ಕೆ.ಎಂ ಯದುಕೃಷ್ಣ ಸಹಾಯಕ ಅಭಿಯಂತರರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ. (ಕಾರ್ಯದರ್ಶಿ)
3. ಶ್ರೀ ವೈ.ಆರ್ ವೆಂಕಟೇಶ್ ಸದಸ್ಯರು.
4. ಶ್ರೀಮತಿ ಪ್ರೇಮ ಮಹಿಳಾ ಸದಸ್ಯರು.
5. ಶ್ರೀಮತಿ ಕಮಲ ಮಹಿಳಾ ಸದಸ್ಯರು.
6. ಶ್ರೀ ರಾಜೇಶ್ ಸದಸ್ಯರು.
7. ಶ್ರೀ ಬಿ.ಆರ್ ಪುಟ್ಟಸ್ವಾಮಿ ಸದಸ್ಯರು.
8. ಶ್ರೀ ಡಾ॥ ನಾಗೇಂದ್ರ ಸದಸ್ಯರು.
9. ಶ್ರೀ ಗೋಪಿ ಸದಸ್ಯರು.
10. ಶ್ರೀ ವೆಂಕಟೇಶ್, ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ.
11. ಶ್ರೀ ಛಾಯಾಪತಿ ಎಂ, ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ.
12. ಶ್ರೀ ಜಿ.ಕೆ ವೆಂಕಟೇಶ್, ಕೆಲಸ ಪರಿವೀಕ್ಷಕರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ.
13. ಶ್ರೀ ಸೋಮನಾಥ್, ಸಹಾಯಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) ವಾರ್ಡ್ ಸಂಖ್ಯೆ.44 ಮಾರಪ್ಪನಪಾಳ್ಯ
14. ಶ್ರೀ ದಿನೇಶ್ ಕುಮಾರ್ ಜಿ.ಕೆ ಸಹಾಯಕ ಅಭಿಯಂತರರು (ಬೆಸ್ಕಾಂ) ವಾರ್ಡ್ ಸಂಖ್ಯೆ.44 ಮಾರಪ್ಪನಪಾಳ್ಯ
15. ಶ್ರೀ ಲೋಕೇಶ್ ಪಶು ಸಂಗೋಪನಾ ಪರಿವೀಕ್ಷಕರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ.
16. ಶ್ರೀ ಲಿಂಗರಾಜ ಕಂದಾಯ ಪರಿವೀಕ್ಷಕರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ.

ಶ್ರೀ ಬಿ.ಆರ್ ಪುಟ್ಟಸ್ವಾಮಿ ಸದಸ್ಯರು ರವರು ಮಾನ್ಯ ಅಧ್ಯಕ್ಷರು ಹಾಗೂ ಸಭೆಯಲ್ಲಿ ಹಾಜರಿದ್ದ ಇತರೆ ಸದಸ್ಯರನ್ನು ಹಾಗೂ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸಲಾಯಿತು.

ಸರ್ವ ಸದಸ್ಯರು ಹಾಗೂ ಅಧಿಕಾರಿಗಳ ಸಮ್ಮುಖದಲ್ಲಿ ಮಾನ್ಯ ಅಧ್ಯಕ್ಷರು ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರ ಸಮಸ್ಯೆಗಳಿಗೆ ಮೊದಲ ಆದ್ಯತೆ ನೀಡಿ ಸಮಸ್ಯೆಗಳನ್ನು ತಿಳಿಸುವಂತೆ ಸೂಚಿಸಿದರು.

1. ಶ್ರೀ ಮಾದೇವ (ಸಾರ್ವಜನಿಕ) ರವರು 1ನೇ, 4ನೇ ಮತ್ತು 6ನೇ ಮುಖ್ಯರಸ್ತೆಯಲ್ಲಿ ಬೀದಿ ದೀಪಗಳು ಹಾಗೂ ಸಿಸಿ ಕ್ಯಾಮರಗಳು ಹಾಳಾಗಿರುವುದರಿಂದ ಸರಿಪಡಿಸುವಂತೆ ಕೋರಿದರು. ಇದಕ್ಕೆ ಮಾಜಿ ಪಾಲಿಕೆ ಸದಸ್ಯರು ಸದರಿ ವಿಷಯವನ್ನು ಈಗಾಗಲೇ ಮಾನ್ಯ ಸಚಿವರು ಆದ ಶ್ರೀ ಗೋಪಾಲಯ್ಯ ರವರ ಹತ್ತಿರ ಚರ್ಚಿಸಲಾಗಿದ್ದು ಅತೀ ಶೀಘ್ರದಲ್ಲೆ ಸರಿಪಡಿಸಲಾಗುವುದು ಎಂದು ತಿಳಿಸಿದರು.
2. ಶ್ರೀ ಮಾದೇವ (ಸಾರ್ವಜನಿಕ) ರವರು ಇಂಟರ್‌ನೆಟ್ ಕೇಬಲ್, ಡಿಶ್ ಕೇಬಲ್ ಮತ್ತು ಇನ್ನಿತರೆ ಕೇಬಲ್‌ಗಳು ವಾರ್ಡ್‌ನಲ್ಲಿ ಜೋತು ಬಿದ್ದಿರುತ್ತವೆ ಆದ್ದರಿಂದ ಜೋತು ಬಿದ್ದ ಕೇಬಲ್‌ಗಳನ್ನು ತೆಗಿಸುವಂತೆ ಕೋರಿದರು. ಇದಕ್ಕೆ ಅಧ್ಯಕ್ಷರು ಸಂಬಂಧಪಟ್ಟ ಎಲೆಕ್ಟ್ರಿಕಲ್ ಅಭಿಯಂತರರು ರವರನ್ನು ಕೇಳಿದರು. ಆದರೆ ಸದರಿ ಅಭಿಯಂತರರು ಸಭೆಗೆ ಹಾಜರಾಗಿಲ್ಲದ ಕಾರಣ ಸದರಿ ರವರನ್ನು ಮುಂದಿನ ಸಭೆಗೆ ಕಡ್ಡಾಯವಾಗಿ ಹಾಜರಿರಬೇಕೆಂದು ತಿಳಿಸುವಂತೆ ಸೂಚಿಸಿದರು.

Scanned with CamScanner

3. ಶ್ರೀ ಶಿವಶಂಕರ್ ಸಾರ್ವಜನಿಕರು ಬೆಳ್ವಾಡಿ ಫ್ಯಾಕ್ಟರಿ ಮುಂದೆ ಮಣ್ಣು ಬಿದ್ದಿದೆ ಹಾಗೂ ಮಳೆ ಬಂದಾಗ ಫ್ಯಾಕ್ಟರಿಯ ಒಳಗಡೆ ಬರುತ್ತಿದೆ ಆದ್ದರಿಂದ ಫ್ಯಾಕ್ಟರಿ ಮುಂದೆ ಇರುವ ಮಣ್ಣನ್ನು ತೆಗೆಸುವಂತೆ ಕೋರಿದರು. ಆಗ ಸಹಾಯಕ ಅಭಿಯಂರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) ರವರು ಸದರಿ ಫ್ಯಾಕ್ಟರಿಯು ತಗ್ಗಿನ ಪ್ರದೇಶದಲ್ಲಿದ್ದು ಗೌತಮನಗರದ ಇಂದ ಬರುವ ಮಳೆ ನೀರು ಈ ಫ್ಯಾಕ್ಟರಿಯ ಹತ್ತಿರ ಹರಿಯುವುದರಿಂದ ಈ ಸಮಸ್ಯೆ ಉಂಟಾಗುತ್ತಿದೆ ಹಾಗೂ ಹಲವು ಬಾರಿ ಮಣ್ಣನ್ನು ತೆರವುಗೊಳಿಸಲಾಗಿದೆ ಎಂದು ತಿಳಿಸಿದರು. ಇದಕ್ಕೆ ಮಾನ್ಯ ಅಧ್ಯಕ್ಷರು ಸ್ಥಳ ಪರಿಶೀಲಿಸಿ ಸಮಸ್ಯೆಯನ್ನು ಬಗೆಹರಿಸಲಾಗುವುದು ಎಂದು ಸೂಚಿಸಿದರು.
4. ಶ್ರೀ ಶಿವಶಂಕರ್ (ಸಾರ್ವಜನಿಕರು) ಬೀದಿ ದೀಪಗಳ ಬಗ್ಗೆ ದೂರು ನೀಡಿದರು ಅಧ್ಯಕ್ಷರು ಸಮಸ್ಯೆಯನ್ನು ಅತೀ ಶೀಘ್ರದಲ್ಲೆ ಪರಿಹರಿಸುವುದಾಗಿ ತಿಳಿಸಿದರು.
5. ಮಾನ್ಯ ಅಧ್ಯಕ್ಷರು ಕಾರ್ಯದರ್ಶಿಗಳಿಗೆ ವಾರ್ಡ್ ಕಛೇರಿಯಲ್ಲಿ ಸಾರ್ವಜನಿಕರ ಸಮಸ್ಯೆಗಳಿಗೆ ಪ್ರತಿ ನಿತ್ಯ ಸಮಯ ನೀಡಿ ಹಾಗೂ ಸಮಸ್ಯೆಯನ್ನು ಪರಿಹರಿಸುವಂತೆ ಸೂಚಿಸಿದರು.
6. ಮಾನ್ಯ ಅಧ್ಯಕ್ಷರು ಹಿಂದಿನ ಸಭೆಯಲ್ಲಿ ನಡೆದ ಪ್ರಸ್ತಾಪಿತ ವಿಷಯಗಳ ಬಗ್ಗೆ ಸಭೆಯಲ್ಲಿ ಹಾಜರಿದ್ದ ಸದಸ್ಯರಿಗೆ, ಅಧಿಕಾರಿಗಳಿಗೆ ಹಾಗೂ ಸಾರ್ವಜನಿಕರಿಗೆ ಓದಿ ತಿಳಿಸಿದರು.
7. ಮಾನ್ಯ ಅಧ್ಯಕ್ಷರು ಕಂದಾಯ ಅಧಿಕಾರಿಗಳನ್ನು ಕಂದಾಯ ವಸೂಲಾತಿಯ ವಿವರವನ್ನು ನೀಡುವಂತೆ ಕೇಳಿದರು ಆದರೆ ಸಭೆಯಲ್ಲಿ ಸದರಿ ಕಂದಾಯ ಪರಿವೀಕ್ಷಕರು ಹಾಜರಾಗಿರಲಿಲ್ಲ ಆದ್ದರಿಂದ ಸದರಿ ರವರನ್ನು ಮುಂದಿನ ಸಭೆಗೆ ಕಡ್ಡಾಯವಾಗಿ ಹಾಜರಿರಬೇಕೆಂದು ತಿಳಿಸುವಂತೆ ಸೂಚಿಸಿದರು.
8. ಮಾನ್ಯ ಅಧ್ಯಕ್ಷರು ಸತ್ತ ಹಸುಗಳ ಸಾಗಾಣಿಕೆಗೆ ತುಂಬಾ ಹಣ ಖರ್ಚಾಗುತ್ತಿರುವುದರಿಂದ ಹಸುಗಳ ಸರ್ವೆ ಮಾಡಿ ಮಾಲೀಕರ ಹೆಸರನ್ನು ಪಡೆದು ಹಸು ಸತ್ತರೆ ಹಸುವಿನ ಮಾಲೀಕರೆ ಸತ್ತ ಹಸುವನ್ನು ಸಾಗಿಸಬೇಕು ಎಂದು ಸೂಚಿಸುವಂತೆ ತಿಳಿಸಿದರು.
9. ಡಾ॥ ನಾಗೇಂದ್ರ ಸದಸ್ಯರು ಕುವೆಂಪು ಸ್ಟ್ಯಾಚ್ಯು, ಸುಬಾಸ್ ಚಂದ್ರ ಬೋಸ್ ಸ್ಟ್ಯಾಚ್ಯೂ ಮತ್ತು ವಾರ್ಡ್‌ನ ಹಲವು ಪ್ರದೇಶಗಳಲ್ಲಿ ಘನತ್ಯಾಜ್ಯವನ್ನು ಹಾಕುತ್ತಿರುತ್ತಾರೆ ಆದ್ದರಿಂದ ಸದರಿ ಸ್ಟ್ಯಾಚ್ಯುಗಳನ್ನು ಸ್ಥಳಾಂತರಿಸಿ ಅಥವಾ ಕಸ ಹಾಕುವುದನ್ನು ತಡೆಗಟ್ಟುವಂತೆ ಕೋರಿದರು. ಇದಕ್ಕೆ ಮಾಜಿ ಪಾಲಿಕೆ ಸದಸ್ಯರು ಈಗಾಗಲೇ ಹಲವು ಭಾರಿ ಕಸ ಹಾಕುತ್ತಿರುವವರಿಗೆ ದಂಡ ವಿಧಿಸಲಾಗಿರುತ್ತದೆ ಆದರೂ ಸಹ ಸಾರ್ವಜನಿಕರು ಕಸವನ್ನು ಹಾಕುತ್ತಿರುತ್ತಾರೆ ಆದ್ದರಿಂದ ದಿನನಿತ್ಯ ಬೆಳಗ್ಗೆ ಮತ್ತು ಸಂಜೆ ಸಮಯದಲ್ಲಿ ಘನತ್ಯಾಜ್ಯ ವಿಲೇವಾರಿ ಆಟೋವನ್ನು 15 ರಿಂದ 20 ನಿಮಿಷಗಳ ಕಾಲ ಪ್ರಸ್ತಾಪಿತ ಸ್ಟ್ಯಾಚ್ಯುಗಳ ಇರುವ ಹತ್ತಿರ ನಿಲ್ಲಿಸಿ ಜನಕ್ಕೆ ಘನತ್ಯಾಜ್ಯವನ್ನು ಆಟೋಗೆ ನೀಡುವಂತೆ ಮೈಕ್‌ನಲ್ಲಿ ಜಾಗೃತಿ ಮೂಡಿಸುವಂತೆ ಶ್ರೀ ಛಾಯಾಪತಿ ಎಂ, ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಚಿಸಿದರು.
10. ಡಾ॥ ನಾಗೇಂದ್ರ ರವರು ಕೋವಿಡ್-19 ಗೆ ಸಂಬಂಧಿಸದಂತೆ ಪಾಸಿಟೀವ್ ಕೇಸಸ್ಸ್, ಹೋಮ್ ಕ್ವಾರಂಟೈನ್ ಲೀಸ್ಟ್, ಸತ್ತವರ ವಿವರ ಮತ್ತು ಕೋವಿಡ್19 ಗೆ ಸಂಬಂಧಿಸಿದ ಇನ್ನಿತರೆ ದಾಖಲೆಗಳನ್ನು ನೀಡುವಂತೆ ಮಾನ್ಯ ಅಧ್ಯಕ್ಷರನ್ನು ಕೋರಿದರು, ಇದಕ್ಕೆ ಮಾನ್ಯ ಅಧ್ಯಕ್ಷರು ಹಿರಿಯ ಆರೋಗ್ಯ ಪರಿವೀಕ್ಷಕರು ದಾಖಲೆಗಳನ್ನು ನೀಡುವಂತೆ ಸೂಚಿಸಿದರು. ಹಿರಿಯ ಆರೋಗ್ಯ ಪರಿವೀಕ್ಷಕರು, ಕೋವಿಡ್-19 ಗೆ ಸಂಬಂಧಿಸಿದ ದಾಖಲೆಗಳನ್ನು ನೀಡಿದರು.
11. ಮಾನ್ಯ ಅಧ್ಯಕ್ಷರು ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ವಾರ್ಡ್ ಸಂಖ್ಯೆ.44 ಮಾರಪ್ಪನಪಾಳ್ಯ ಗೆ ಸಂಬಂಧಪಟ್ಟ ವೈದ್ಯಾಧಿಕಾರಿಗಳಿಗೆ ಮುಂದಿನ ಸಭೆಗೆ ಕಡ್ಡಾಯವಾಗಿ ಹಾಜರಾಗುವಂತೆ ತಿಳಿಸಲು ಸೂಚಿಸಿದರು.
12. ಮಾನ್ಯ ಅಧ್ಯಕ್ಷರು ಪಾದಚಾರಿ ಮಾರ್ಗದಲ್ಲಿ ನಿಲ್ಲಿಸಿರುವ ಆಟೋವನ್ನು ತೆಗೆಸುವಂತೆ ಸಹಾಯಕ ಅಭಿಯಂತರರಿಗೆ ಹಾಗೂ ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಚಿಸಿದರು.

Scanned with CamScanner

13.ಮಾನ್ಯ ಅಧ್ಯಕ್ಷರು ಸಹಾಯಕ ಅಭಿಯಂರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ)ರವರಿಗೆ ಸೋಮೇಶ್ವರ ನಗರದಲ್ಲಿ ದುರಸ್ಥಿಗೊಂಡಿರುವ ಸ್ಯಾನಿಟರಿ ಪೈಪುಗಳನ್ನು ಸರಿಪಡಿಸುವಂತೆ ಸೂಚಿಸಿದರು. ಇದಕ್ಕೆ ಸಂಬಂದಪಟ್ಟ ಸಹಾಯಕ ಅಭಿಯಂತರರು ಈಗಾಗಲೇ ಈ ವಿಷಯದ ಬಗ್ಗೆ ಮೇಲಾಧಿಕಾರಿಗಳಿಗೆ ಪತ್ರ ಬರೆಯಲಾಗಿದೆ ಎಂದರು ಅದಕ್ಕೆ ಮಾನ್ಯ ಅಧ್ಯಕ್ಷರು ಮತ್ತೊಮ್ಮೆ ಮೇಲಾಧಿಕಾರಿಗಳಿಗೆ ಪತ್ರ ಬರೆಯುವಂತೆ ಸೂಚಿಸಿದರು.

14.ಶ್ರೀಮತಿ ಬೀಬಿಜಾನ್ ಮತ್ತು ಶ್ರೀ ಚಂದ್ರಕಲ ಸಾರ್ವಜನಿಕರು ವಿಜಯಾನಂದನಗರ ಹಾಗೂ ಪೋಲೀಸ್ ಕ್ವಾಟ್ರಸ್‌ನಲ್ಲಿ ದುರಸ್ಥಿಗೊಂಡಿರುವ ಸ್ಯಾನಿಟರಿ ಪೈಪುಗಳನ್ನು ಸರಿಪಡಿಸುವಂತೆ ಕೋರಿದರು. ಮಾನ್ಯ ಅಧ್ಯಕ್ಷರು ಸಂಬಂಧಪಟ್ಟ ಸಹಾಯಕ ಅಭಿಯಂತರರಿಗೆ ಸರಿಪಡಿಸಲು ಸೂಚಿಸಿದರು.

15.ಶ್ರೀ ಗೋಪಿ, ಸದಸ್ಯರುರವರು ಬೀದಿ ದೀಪಗಳ ನಿರ್ವಹಣೆಯನ್ನು ಗುತ್ತಿಗೆ ನೀಡಲಾಗಿತ್ತು, ಸದರಿ ಗುತ್ತಿಗೆ ನೀಡಿದ ಅವಧಿ ಮುಕ್ತಾಯವಾಗುವ ಸಮಯ ಬಂದಿರುವುದರಿಂದ ಮೊದಲೇ ಗುತ್ತಿಗೆ ನೀಡಲು ವ್ಯವಸ್ಥೆ ಮಾಡಿಕೊಳ್ಳಬೇಕು, ಇಲ್ಲವಾದಲ್ಲಿ ತುಂಬ ಸಮಸ್ಯೆಗಳು ಎದುರಾಗುತ್ತವೆ ಎಂದು ತಿಳಿಸಿದರು. ಇದಕ್ಕೆ ಮಾನ್ಯ ಅಧ್ಯಕ್ಷರು ಸಂಬಂಧಪಟ್ಟ ಕಾರ್ಯಪಾಲಕ ಅಭಿಯಂತರರು (ವಿದ್ಯುತ್)ರವರಿಗೆ ಸೂಚಿಸುತ್ತೇನೆ ಎಂದು ತಿಳಿಸಿದರು.

16.ಶ್ರೀ ರಾಜೇಶ್ ಸದಸ್ಯರು ಎಪಿಎಂಸಿ ಮಾರುಕಟ್ಟೆ ಸ್ಥಳಾಂತರಿಸಿರುವುದರಿಂದ ಆ ಜಾಗದಲ್ಲಿ ಸಾರ್ವಜನಿಕರು ಕಸ ಹಾಕುತ್ತಿರುತ್ತಾರೆ ಎಂದು ತಿಳಿಸಿದರು. ಇದಕ್ಕೆ ಉತ್ತರಿಸಿದ ಮಾನ್ಯ ಅಧ್ಯಕ್ಷರು ಇದರ ಬಗ್ಗೆ ಮಾನ್ಯ ಸಚಿವರ ಜೊತೆ ಚರ್ಚಿಸಲಾಗಿದ್ದು, ಸಂಬಂಧಪಟ್ಟ ಎಪಿಎಂಸಿ ಅಧಿಕಾರಿಗಳಿಗೆ ಗೇಟ್‌ಗಳನ್ನು ಅಳವಡಿಸಿಕೊಳ್ಳುವಂತೆ ಪತ್ರ ಬರೆಯಲಾಗಿದೆ ಎಂದು ತಿಳಿಸಿದರು.

17.ಶ್ರೀ ವೈ.ಆರ್ ವೆಂಕಟೇಶ್ ಸದಸ್ಯರು ಉಲ್ಲಾಸ್ ಥಿಯೇಟರ್ ಮತ್ತು ಅಗ್ನಿಶಾಮಕ ದಳದ ಹತ್ತಿರ ವಾಹನಗಳು ತುಂಬಾ ದಿನಗಳ ಕಾಲ ನಿಲ್ಲಿಸಿ ಹೋಗುತ್ತಿರುತ್ತಾರೆ ಮತ್ತು ಇದರಿಂದ ಮೂತ್ರ ವಿಸರ್ಜನೆ ಹೆಚ್ಚಾಗುತ್ತರುತ್ತದೆ ಆದ್ದರಿಂದ ವಾಹನಗಳನ್ನು ನಿಲ್ಲಿಸದೆ ಇರುವ ರೀತಿ ಕ್ರಮಕೈಗೊಳ್ಳಬೇಕು ಎಂದು ಕೋರಿದರು. ಇದಕ್ಕೆ ಮಾನ್ಯ ಅಧ್ಯಕ್ಷರು ಸಂಚಾರಿ ಪೋಲೀಸ್‌ರವರ ಜೊತೆ ಚರ್ಚಿಸಿ, ಸಮಸ್ಯೆ ಬಗೆಹರಿಸಲು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

18.ಮಾನ್ಯ ಅಧ್ಯಕ್ಷರು, ಸಿಲ್ಟ್ ಅಂಡ್ ಟ್ರಾಕ್ಟರ್ ಗುತ್ತಿಗೆದಾರರನ್ನು ಟ್ರಾಕ್ಟರ್‌ನನ್ನು ಪ್ರತಿದಿನ ಕಳುಹಿಸುತ್ತಿದ್ದೀರಾ ಎಂದು ಕೇಳಿದಾಗ. ಸದರಿ ಗುತ್ತಿಗೆದಾರರು ಇನ್ನೂ ಹಳೆ ಬಿಲ್ಲಿನ ಹಣವನ್ನು ಬಿಬಿಎಂಪಿ ವತಿಯಿಂದ ಪಾವತಿಸಿಲ್ಲ ಎಂದು ಹೇಳಿದರು. ಇದಕ್ಕೆ ಮಾನ್ಯ ಅಧ್ಯಕ್ಷರು ಹಣ ಪಾವತಿ ಆಗುತ್ತದೆ ಸ್ವಲ್ಪ ತಡವಾಗಿ ಆಗಬಹುದು ಅಷ್ಟೆ ಎಂದು ತಿಳಿಸಿದರು. ಗುತ್ತಿಗೆದಾರರು ಇನ್ನು ಮುಂದೆ ಪ್ರತಿದಿನ ಕಳುಹಿಸುತ್ತೇನೆ ಎಂದು ತಿಳಿಸಿದರು.

19.ಮಾನ್ಯ ಅಧ್ಯಕ್ಷರುರವರು ಶ್ರೀ ಲೋಕೇಶ್ ಪಶು ಸಂಗೋಪನಾ ಪರಿವೀಕ್ಷಕರಿಗೆ ಹಸುಗಳ ಪಟ್ಟಿ ನೀಡುವಂತೆ ಸೂಚಿಸಿದರು. ಆದರೆ ಶ್ರೀ ಲೋಕೇಶ್‌ರವರು ಆಸ್ಪತ್ರೆಗಳಲ್ಲಿ ಲಭ್ಯವಿರುತ್ತದೆ ಎಂದು ತಿಳಿಸಿದರು. ಮಾನ್ಯ ಅಧ್ಯಕ್ಷರು ಶ್ರೀ ಲೋಕೇಶ್ ರವರಿಗೆ ಆಸ್ಪತ್ರೆಯಿಂದ ಮಾಹಿತಿ ಪಡೆದು ಮುಂದಿನ ಸಭೆಯಲ್ಲಿ ನೀಡುವಂತೆ ಸೂಚಿಸಿದರು.

20.ಮಾನ್ಯ ಅಧ್ಯಕ್ಷರು ಅಂತಿಮವಾಗಿ ಸಭೆಗೆ ಹಾಜರಿದ್ದ ಸದಸ್ಯರು, ಅಧಿಕಾರಿಗಳು ಮತ್ತು ಸಾರ್ವಜನಿಕರಿಗೆ ವಂದನೆಗಳು ಹೇಳುತ್ತಾ ಸಭೆಯನ್ನು ಮುಕ್ತಾಯಗೊಳಿಸಿದರು.

**ಅಧ್ಯಕ್ಷರು**

K. Swayamprakash 7/11/2020

ವಾರ್ಡ್ ಕಮಿಟಿ, ವಾರ್ಡ್.ಸಂಖ್ಯೆ.44 ಮಾರಪ್ಪನಪಾಳ್ಯ

Scanned with CamScanner